**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಕಾರವಾರ**

ಸಿ.ಸಿ.ನಂ. 2853/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ. ಕುಮಾರ ನಾಯ್ಕ | ಪಿ ಡಬ್ಲ್ಯೂ: **6** |
| ತಂದೆಯ/ಗಂಡನ ಹೆಸರು | : | ಹೊನ್ನಪ್ಪ | ಸಿ ಡಬ್ಲ್ಯೂ: **8** |
| ವಯಸ್ಸು | : | **45** ವರ್ಷ | |
| ಉದ್ಯೋಗ | : | ಸಿ ಎಚ್ ಸಿ **634** ಕಾರವಾರ ಗ್ರಾಮೀಣ ಪೋಲಿಸ್ ಠಾಣೆ | |
| ವಾಸ್ತವ್ಯ | : | ಕಾರವಾರ | |

ಸತ್ಯ ಪ್ರತಿಜ್ಞೆಯ ಮೇರೆಗೆ: **23-04-2026**

**ಮುಖ್ಯ ವಿಚಾರಣೆ: ಮಾನ್ಯ ಹಿರಿಯ ಸ ಸ ಅ ರವರಿಂದ:**

ನಾನು ಕಳೆದ ಆರೂವರೆ ವರ್ಷಗಳಿಂದ ಇಲ್ಲಿಯವರೆಗೆ ಕಾರವಾರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 05-10-2024 ರಂದು ನಾನು ಹಾಗೂ ಚಾಸಾ-4, ರಿಂದ 7 ರವರೊಂದಿಗೆ ಶಿರವಾಡ-ಕಡವಾಡ ಪೆಟ್ರೋಲಿಂಗ್ ಕರ್ತವ್ಯದಲ್ಲಿರುವಾಗ 5-30 ಗಂಟೆಗೆ ಬಾತ್ಮಿದಾರರಿಂದ ಶಿರವಾಡ ಇಂಡಸ್ಟ್ರೀಯಲ್ ಏರಿಯಾ ಹತ್ತಿರ ಆರೋಪಿತನಾದ ದಯಾನಂದ ಪೆಡ್ನೇಕರ್ ಎಂಬ ವ್ಯಕ್ತಿಯು ಅಕ್ರಮವಾಗಿ ಗೋವಾ ಸಾರಾಯಿಯನ್ನು ತಂದು ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಅದರಂತೆ 6-30 ಗಂಟೆಗೆ ಚಾಸಾ-2 ಮತ್ತು 3 ರವರು ಶಿರವಾಡ ಗ್ರಾಮದವರಾಗಿದ್ದು ಅವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ದಾಳಿಯ ವಿಷಯವನ್ನು ತಿಳಿಸಿ ಅವರಿಗೆ ನೋಟಿಸು ನೀಡಿ ಅವರು ಪಂಚರಾಗಲು ಒಪ್ಪಿದ ನಂತರ 7-50 ಗಂಟೆಗೆ ನಾವು ಶಿರವಾಡ ಇಂಡಸ್ಟ್ರೀಯಲ್ ಏರಿಯಾ ಹತ್ತಿರ ಹೋಗಿ ಆರೋಪಿಯ ಮನೆಯ ಹತ್ತಿರ ಹೋಗಿ ಅಲ್ಲಿ ನೋಡಿದಾಗ ಒಬ್ಬ ವ್ಯಕ್ತಿಯು ಕುರ್ಚಿಯ ಮೇಲೆ ಕುಳಿತಿದ್ದು ಅವನು ನಮ್ಮನ್ನು ನೋಡಿ ಗಾಬರಿಗೊಂಡು, ಅವನಿಗೆ ತನ್ನ ಹೆಸರು ಮತ್ತು ವಿಳಾಸ ಕೇಳಲಾಗಿ ತಾನು ದಯಾನಂದ ನಾಗೇಶ ಪೆಡ್ನೇಕರ್, ವಾಸ ಶಿರವಾಡ ಅಂತಾ ಹೇಳಿದ್ದು ಅವರ ಬಳಿ ಗೋವಾ ಸಾರಾಯಿ ಇದೆಯಾ ಅಂತಾ ಕೇಳಿದಂತೆ ಅವರು ತಡವರಿಸಿದಾಗ ನಮ್ಮ ಸಿಬ್ಬಂದಿಯವರ ಜೊತೆಗೂಡಿ ಅವರ ಸಹಾಯದಿಂದ ಅಕ್ಕಪಕ್ಕದಲ್ಲಿ ಶೋಧನೆ ಮಾಡಿದಾಗ ಅವರು ಕುಳಿತಿದ್ದ ಜಾಗದ ಪಕ್ಕದಲ್ಲಿ ಒಂದು ತೆಂಗಿನ ಮರ ಇದ್ದು ಅದರ ಕೆಳಗೆ ಒಂದು ಕೈ

ಚೀಲ ಸಿಕ್ಕಿದ್ದು ಅದು ಹಳದಿ–ಹಸಿರು ಬಣ್ಣದ್ದು ಆಗಿದ್ದು ಅದರಲ್ಲಿ ಗೋವಾ ಸಾರಾಯಿ ಬಾಟಲಿಗಳಿದ್ದು ಅದರ ಬಗ್ಗೆ ಆರೋಪಿಯ ಬಳಿ ವಿಚಾರಿಸಲಾಗಿ ಅದನ್ನು ತಾನು ಗೋವಾ ರಾಜ್ಯದ ಸಾರಾಯಿ ಇದ್ದು ತಾನು ಕಾರವಾರದಿಂದ ತೆಗೆದುಕೊಂಡು ಬಂದಿರುವ ಬಗ್ಗೆ ತಿಳಿಸಿರುತ್ತಾನೆ. ಇದನ್ನು ತಾನು ದುಪ್ಪಟ್ಟು ಬೆಲೆಗೆ ಮಾರುವ ಉದ್ದೇಶದಿಂದ ತೆಗೆದುಕೊಂಡು ಬಂದಿರುತ್ತೇನೆ ಅಂತಾ ತಿಳಿಸಿರುತ್ತಾನೆ. ಸದ್ರಿ ಕೈಚೀಲದಲ್ಲಿರುವ ಸಾರಾಯಿ ಬಾಟಲಿಗಳನ್ನು ತೆಗೆದು ಪಂಚರ ಸಮಕ್ಷಮ ಪರೀಲಿಸಿದಾಗ ಅದರಲ್ಲಿ Light Horse Whiskey for sale in Goa only 750 ಎಂ.ಎಲ್ ನ 6 ಬಾಟಲಿಗಳು , Light Horse Whiskey for sale in Goa only 180 ಎಂ.ಎಲ್ ನ 3 ಬಾಟಲಿಗಳು , Goa Special Palm Fenney 750 ಎಂ ಎಲ್ ನ 1 ಬಾಟಲಿ, ಹಾಗೂ Goa Special Palm Fenney 180 ಎಂ ಎಲ್ ನ 2 ಬಾಟಲಿಗಳು ಇದ್ದು ಅವುಗಳನ್ನು ಮಾರಾಟ ಮಾಡಲು ತಮ್ಮ ಬಳಿ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಅದಕ್ಕೆ ಅವರು ಇಲ್ಲ ಅಂತಾ ಹೇಳಿರುತ್ತಾರೆ. ಸದ್ರಿ ಎಲ್ಲಾ ಸಾರಾಯಿ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲು ಬಿಳಿ ಬಟ್ಟೆಯಿಂದ ಸುತ್ತಿ ಅರಗಿನ ಮೊಹರು ಹಾಕಿ ಬಿಳಿ ಚೀಟಿಗಳನ್ನು ಪಂಚರ ಸಹಿ ಪಡೆದು ಅಂಟಿಸಿ ಆ ಸಮಯದಲ್ಲಿ ಚಾಸಾ–9 ರವರು ಪ್ರತ್ಯಕ್ಷದರ್ಶಿಯಾಗಿ ಹಾಜರಿದ್ದರು. ನಾನು ನಿಪಿ–1 ಪಂಚನಾಮೆಗೆ ಸಹಿ ಮಾಡಿರುತ್ತೇನೆ . ಸಾಕ್ಷಿ ನಿಪಿ–1 ರ ಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ–1(ಇ) ಎಂದು ಗುರುತಿಸಲಾಯಿತು. ಸದ್ರಿ ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ.

3. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುಮಾ–1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತ ಪರಃ ಶ್ರೀ ಜಿ ಪಿ ಟಿ ವಕೀಲರಿಂದಃ**

ನಾನು ಯಾವುದೇ ಸಮಯದಲ್ಲಿ ದಾಳಿಯಲ್ಲಿ ಭಾವಹಿಸಿದ್ದಾಗಲೀ, ಪಂಚನಾಮೆಯನ್ನು ಬರೆದು ಸಹಿ ಮಾಡಿದ್ದಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಆರೋಪಿಯ ವಶದಿಂದ ಯಾವುದೇ ಮುಮಾಗಳನ್ನು ಜಪ್ತು ಪಡಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ . ಚಾಸಾ–1 ರವರು ನನ್ನ ಮೇಲಾಧಿಕಾರಿಯಾದ ಕಾರಣ ಅವರು ಹೇಳಿದಂತೆ ಪಂಚನಾಮೆ ಬರೆದು ಪ್ರಕರಣಕ್ಕೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿ

ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗೂ ಈ ಪ್ರಕರಣಕ್ಕೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಕಾರವಾರ**